
# ವರುಣನ ಆರ್ಭಟ

■ ರಾಧೇಶ ತೋಳ್ಪಾಡಿ

ಚಿತ್ರ: ಸಂತೋಷ್ ಸಸಿಹಿತ್ಲು



ಯಾವ ದೂರು ಹೋಯಿತೇನೋ
ವರುಣ ದೇವಗೆ!
ಯಾರ ಹುಡುಕಿಕೊಂಡು ಬಂದ
ಇರುಳ ವೇಳೆಗೆ!

ನುಗ್ಗಿ ಬರುವ ರಭಸ ನೋಡಿ
ಏನು ಆರ್ಭಟ!
ಏನು ಸಿಟ್ಟು! ಎಂಥ ಸೆಡವು!
ಯಾಕೆ ಆವುಟ!

ಕಡಿದಿರೇಕೆ ಕೋಟಿ ವೃಕ್ಷ
ಕೇಳುತಿರುವನೋ?
ಹೋದವೆಲ್ಲಿ ಬೆಟ್ಟ ಗುಡ್ಡ
ಹುಡುಕುತಿರುವನೋ?

ತಿವಿದು ಖಡ್ಗ ಮಿಂಚಿನಿಂದ
ಹತ್ತು ದಿಕ್ಕನು
ಬಂದನೇನು ಮುರಿವೆನೆಂದು
ಯುಗದ ಸೊಕ್ಕನು?

ಬಿಡುವ ಮಾತೆ ಇಲ್ಲ ಕಡಲ
ಒಡಲು ಹೊಕ್ಕರೂ
ಗುಡುಗುತಿರುವ ಧುಡುಧುಡೆಂದು
ಓಡಿ ಬಂದರೂ!

ವರುಣ ದೇವ ಕಡಲ ಮೈಯ
ತುಳಿದ ರಭಸಕೆ
ಸಿಡಿದು ಹೋಯ್ತು ಕಡಲ ನೀರು
ಬಾನ ಹೃದಯಕೆ!

ವರುಣ ದೇವ ದೈವವಲ್ಲ
ಯಾವ ಭೂತವು
ಇವನ ಮೈಯ ಹೊಕ್ಕಿತಿಂದು
ಕೇಡುಗಾಲವು!

ವೃಕ್ಷ ಮಕ್ಕಳನ್ನು ಆಚೆ
ಈಚೆ ತಳ್ಳುತ
ರೊಯ್ಯನೆಂದು ಬಯಲಿನಲ್ಲಿ
ಬುಗುರಿ ಸುತ್ತುತ

ಸೇಕಿಕೊಂಡು ದೂಕಿಕೊಂಡು
ಎಲ್ಲಿಗೋಟವು?
ಇದರೊಳುಂಟೆ ನಾವು
ಕಲಿಯುವಂಥ ಪಾಠವು?

## ಕುಂಚ ಪ್ರಪಂಚ



**ಸಾಕ್ಷಿ ದೇವರಡ್ಡಿ**
2ನೇ ತರಗತಿ, ಬಸವೇಶ್ವರ
ಸಿ.ಬಿ.ಎಸ್‌ಇ. ಸ್ಕೂಲ್,
ನರೇಗಲ್



**ಸುಕೃತಿ**
ಯುಕೆಜಿ, ಪೋಷಣ್
ಶಾಲೆ, ಬೆಂಗಳೂರು





**ಐಶಾನಿ ಬಾಲಾಜಿ**
4ನೇ ತರಗತಿ,
ಜ್ಞಾನೋದಯ ಶಾಲೆ,
ಬೆಂಗಳೂರು

